# ಜರ್ಮನಿ ಹುಡುಗಿಯ ಯಕ್ಷ ಸ್ನೇಹ

■ ಚಿತ್ರ ಬರಹ: **ನವೀನ್ ಭಟ್. ಎಚ್**

**ಕ**ನ್ನಡ ಮಾತನಾಡುವ ಕ್ಯಾಥರೀನಾ, ಜರ್ಮನಿಯವಳು. ಜರ್ಮನಿಯ ವಿಶ್ವವಿದ್ಯಾನಿಲಯದಲ್ಲಿ ಪಿಎಚ್‌ಡಿ ಅಭ್ಯಾಸಕ್ಕೆ ಯಕ್ಷಗಾನವನ್ನು ಆರಿಸಿಕೊಂಡವಳು.

1996ರಲ್ಲಿ ಜರ್ಮನಿಯಲ್ಲಿ ಉಡುಪಿ ಯಕ್ಷಗಾನ ಕೇಂದ್ರವು ಅನೇಕ ಪ್ರದರ್ಶನಳನ್ನು ನೀಡಿತ್ತು. ಅಂತರ್ಜಾಲದ ಮೂಲಕ ಈ ಕೇಂದ್ರದ ವಿವರ ತಿಳಿದು ಅರಸುತ್ತಾ ಬಂದ ಈಕೆ ತಲುಪಿದ್ದು ಬನ್ನಂಜೆಯ ಸಂಜೀವ ಸುವರ್ಣ ಬಳಿ.

ಯಕ್ಷಗಾನದ ಒಲವು ಹೊಂದಿದ್ದ ಕ್ಯಾಥರೀನಾಗೆ 'ಯಕ್ಷಗಾನ ಕಲಿಯಲು ಕನ್ನಡ ಸ್ಪಷ್ಟತೆ ಅತೀ ಮುಖ್ಯ' ಎಂದು ಹೇಳಿದ್ದೇ ತಡ, ಪಟ್ಟು ಬಿಡದ ಆಕೆ ಮಂಗಳೂರು ವಿ.ವಿ ಯಲ್ಲಿ ಕನ್ನಡ ಅಭ್ಯಾಸವನ್ನೂ ಮಾಡಿದಳು.

ಯಕ್ಷಗಾನದ ಹಿಮ್ಮೇಳಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಕ್ಯಾಥರೀನಾಗೆ ಬಡಗುತಿಟ್ಟಿನ ಎಲ್ಲಾ ಪಟ್ಟುಗಳನ್ನು ಲೀಲಾಜಾಲವಾಗಿ ಪ್ರದರ್ಶಿಸುವ ಸಾಮರ್ಥ್ಯವಿದೆ. ಜೊತೆಗೆ ಕಥಕ್ ನೃತ್ಯದ ಬಗ್ಗೆಯೂ ಒಲವಿದೆ. ಪಂಚವಟಿ, ಜಾಂಬವತಿ ಕಲ್ಯಾಣ, ಅಭಿಮನ್ಯು ಕಾಳಗ ಸೇರಿದಂತೆ ಅನೇಕ ಯಕ್ಷಗಾನ ಪ್ರಸಂಗಗಳಲ್ಲಿ ಗಂಡು ಮತ್ತು ಸ್ತ್ರೀ ಪಾತ್ರಗಳನ್ನು ಈಕೆ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಜರ್ಮನಿ, ಬೆಲ್ಜಿಯಂ, ನವದೆಹಲಿ, ಉಡುಪಿ ಸೇರಿದಂತೆ ಹಲವೆಡೆ ಯಕ್ಷಗಾನ ಕಲೆಯನ್ನು ಪಸರಿಸಿದ ಹೆಮ್ಮೆಯೂ ಈ ವಿದೇಶಿ ಪ್ರತಿಭೆಯದ್ದು.

'ಅಭಿಮನ್ಯು ಕಾಳಗ' ಎಂಬ ಪ್ರಸಂಗವನ್ನು ಜರ್ಮನ್ ಭಾಷೆಗೆ ತರ್ಜುಮೆ ಮಾಡಿ ಅಲ್ಲಿ ಪ್ರದರ್ಶನ ನಡೆಸಿ ಜರ್ಮನಿಗರಿಂದಲೂ ಶಹಭಾಸ್‌ಗಿರಿ ಪಡೆದಿದ್ದಾರೆ. ಅಲ್ಲದೆ ಅಲ್ಲಿನ ಅನೇಕ ಶಾಲೆಗಳಿಗೆ ಭೇಟಿ ನೀಡಿ, ನಾನಾ ವಿದ್ಯಾರ್ಥಿಗಳಿಗೆ ಯಕ್ಷಗಾನ ಕಲೆಯ ಪರಿಚಯ ಮಾಡಿಸುತ್ತಿದ್ದಾರೆ.

ಕ್ಯಾಥರೀನಾ ಮೂಲತಃ ಜರ್ಮನಿಯವರಾದರೂ ಇಲ್ಲಿನ ಸಂಸ್ಕೃತಿ ಬಗ್ಗೆ ಒಲವು ಹೆಚ್ಚು. ಭಾರತೀಯರಂತೆ ಸೀರೆ ತೊಡುತ್ತಾಳೆ. ಕ್ಯಾಥರೀನಾ ತನ್ನ ವಿವಾಹವನ್ನು ಭಾರತದ ಒಂದು ಸಂಪ್ರದಾಯದ ಮಾದರಿಯಲ್ಲಿ ಮಾಡಿಕೊಂಡಿದ್ದು, ಮಕ್ಕಳಿಗೂ ಉಷಾ ಮತ್ತು ಯಶೋಧರ ಎಂಬ ಹೆಸರಿಟ್ಟಿದ್ದಾರೆ. ಈಕೆ ಯಕ್ಷ ಪಯಣಕ್ಕೆ ಪತಿ, ಡಾಕ್ಟರ್ ಜೀನ್ಸ್ ಬಿಂದರ್, ತಂದೆ ಐ.ಕೆ ಫ್ರೀಶರ್ ಮತ್ತು ತಾಯಿ ಡಕ್ಮಾ ಫ್ರೀಷರ್ ಬೆಂಬಲವಾಗಿ ನಿಂತಿದ್ದಾರೆ.

ಸದ್ಯ ಜರ್ಮನಿಯ ಶಿಕ್ಷಣ ಸಂಸ್ಥೆಯೊಂದರಲ್ಲಿ ಕನ್ನಡ ಮತ್ತು ಸಂಸ್ಕೃತ ಉಪನ್ಯಾಸಕಿಯಾಗಿರುವ ಕ್ಯಾಥರೀನಾ, ಪ್ರತೀ ವರ್ಷವೂ ಉಡುಪಿಗೆ ಬಂದು ಯಕ್ಷಗಾನದ ಉಳಿದ ಪ್ರಾಕಾರವನ್ನು ಮೈಗೂಡಿಸುತ್ತಿರುವುದು ವಿಶೇಷ. ●



ಕ್ಯಾಥರೀನಾ ಯಕ್ಷ ಪ್ರೀತಿ.



ಕ್ಯಾಥರೀನಾ ಪತಿ ಜತೆ



ಗುರುವಿನ ಜತೆ